ಶ್ರೀ ಎಂ.ವೈ. ಘೋರ್ಪಡೆ : ಗ್ರಾಮ ಸಭೆಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡಲು ಏನೇನು ಪ್ರಯತ್ನ ಮಾಡಬೇಕು, ಆ ಪ್ರತಯ್ನವನ್ನು ಯಶಸ್ವಿಯಾಗಿ ನಾವು ಮಾಡುತ್ತೇವೆ. ಅದರ ಬಗ್ಗೆ ನಾವು ಯೋಚನೆಯನ್ನು ಕೂಡ ಮಾಡಿದ್ದೇವೆ. ಕಾನೂನಿಗೆ ಅಮೆಂಡ್‌ಮೆಂಟ್ಸ್ ಮಾಡಬೇಕಾಗುತ್ತದೆ. ಅದನ್ನು ಮಾಡುವಾಗ ಗ್ರಾಮ ಸಭೆಗಳನ್ನು ಎಷ್ಟರಮಟ್ಟಿಗೆ ಶಕ್ತಿಯುತವಾಗಿ ಮಾಡಲು ಸಾಧ್ಯವೋ ಅಷ್ಟರಮಟ್ಟಿಗೆ ನಾವು ಮಾಡುತ್ತೇವೆ.

ಹಾಸನ ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ದುರಸ್ಥಿ

111 - ಶ್ರೀ ಹನುಮೇಗೌಡ ಕೆ.ಹೆಚ್. (ಹಾಸನ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನದ ಪ್ರಥಮ ದರ್ಜೆ ಕಾಲೇಜಿನ ಆರ್.ಸಿ.ಸಿ. ಶಿಥಿಲಗೊಂಡಿರುವುದರಿಂದ ಮಳೆಗಾಲದಲ್ಲಿ ನೀರು ಸೋರಿ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಸದರಿ ಕಾಲೇಜಿನ ದುರಸ್ತಿಯ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸರಕಾರ ಕ್ರಮ ತೆಗೆದುಕೊಳ್ಳುವುದೇ?*

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) 1994-95ರಲ್ಲಿ ಹಾಸನ ಕಲಾ ಮತ್ತು ವಿಜ್ಞಾನ ಕಾಲೇಜುಗಳಿಗೆ ಹೊಸದಾಗಿ ಕ್ಲಾಸ್ ರೂಂಗಳನ್ನು ಕಟ್ಟಿಸಲಾಗಿದೆ. ಕಟ್ಟಿದ ವರ್ಷದಿಂದಲೇ ಮಳೆ ಬಂದಾಗಲೆಲ್ಲಾ ಛಾವಣಿಯಿಂದ ನೀರು ಸೋರುತ್ತಿದ್ದುದರಿಂದ ಡಿಸೆಂಬರ್ 99ರಲ್ಲಿ ರೂ. 3.00 ಲಕ್ಷಗಳನ್ನು ಖರ್ಚು ಮಾಡಿ ಕೆಲವು ತರಗತಿ ಕೊಠಡಿಗಳ ಮೇಲೆ ಚುರ್ಕಿಯನ್ನು ಹಾಕಿಸಲಾಗಿದೆ. ಆದರೆ ಉಳಿದ ಕೊಠಡಿಗಳಿಗೆ ಚುರ್ಕಿಯನ್ನು ಹಾಕಿಸಲು ರೂ. 9.50 ಲಕ್ಷಗಳ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ ಮಾಡಿದೆ. ಈ ಬಗ್ಗೆ 2000-2001ರ ಆಯವ್ಯಯದಲ್ಲಿ ಕಾಲೇಜಿನ ಕಟ್ಟಡ ನಿರ್ಮಾಣ, ದುರಸ್ಥಿ ಮುಂತಾದವುಗಳಿಗೆ ಬಿಡುಗಡೆ ಮಾಡಲಾದ ಅನುದಾನದ ಮಿತಿಯೊಳಗೆ ಕ್ರಮ ಜರುಗಿಸುವ ಬಗ್ಗೆ ಪರಿಶೀಲಿಸಲಾಗುವುದು.

10.40 ಎ.ಎಂ

ಶ್ರೀ ಕೆ.ಎಚ್. ಹನುಮೇಗೌಡ : ಸ್ವಾಮಿ ಹಾಸನದ ಪ್ರಥಮದರ್ಜೆ ಕಾಲೇಜ್ ಕಟ್ಟಡ 50 ಲಕ್ಷ ರೂಪಾಯಿಗಳದು, ಅದನ್ನು ಕಟ್ಟಿರುವವರು ಪಿಡಬ್ಲ್ಯುಡಿಯವರು, ಎಕ್ಸಿಕ್ಯುಟಿವ್ ಇಂಜಿನಿಯರ್, ಸೂಪರಿಂಟೆಂಡೆಂಟ್ ಇಂಜಿನಿಯರ್ ವಗೈರೆಯವರೆಲ್ಲ ಅದನ್ನು ಚೆಕ್ ಮಾಡಿರುತ್ತಾರೆ. ನಿಮಗೆ ವಹಿಸಿಕೊಟ್ಟ ಮೊದಲನೇ ವರ್ಷದಿಂದಲೇ ಅದು ಸೋರುತ್ತಿದೆಯೆಂದು ನೀವು ಉತ್ತರಿಸಿದ್ದೀರಲ್ಲ

ಯಾರ ಮನೆ ದುಡ್ಡು ಸ್ವಾಮಿ? ಆ ಕಟ್ಟಡದಲ್ಲಿ ಸುಮಾರು ಎರಡು ಸಾವಿರ ಹುಡುಗರು ಓದುತ್ತಿದಾರೆ. ಆ ಕಟ್ಟಡ ಕಟ್ಟಿಕೊಟ್ಟ ವರ್ಷದಿಂದಲೇ ಸೋರುತ್ತಿದೆಯೆಂದು ಯಾವ ಸಂಕೋಚವೂ ಇಲ್ಲದೆ ಹೇಳಿದ್ದಕ್ಕೆ ಆ ನಿಮ್ಮ ಫ್ರಾಂಕ್‌ನೆಸ್‌ಗೆ ಬಹಳ ಥ್ಯಾಂಕ್ಸ್. ಆದರೆ ಅದಕ್ಕೆ ಹೇಳುವವರು ಕೇಳುವವರು ಯಾರೂ ಇಲ್ಲವೇ 50 ಲಕ್ಷ ರೂಪಾಯಿಗಳು ಯಾರ ಮನೆ ದುಡ್ಡು ಅದು? ನಿಮ್ಮ ಇಲಾಖೆ ಆ ಕಟ್ಟಡವನ್ನು ವಹಿಸಿಕೊಂಡಾಗ ಅದು ಫಿಟ್ ಕಂಡಿಶನ್‌ನಲ್ಲಿದೆಯೇ? ನಾವು ಖರ್ಚು ಮಾಡಿರುವ ಹಣಕ್ಕೆ ಸರಿಯಾಗಿ ಕಟ್ಟಡ ಆಗಿದೆಯೋ? ಈ ಕಟ್ಟಡದಲ್ಲಿ ಹುಡುಗರು ನೆಮ್ಮದಿಯಾಗಿ ಒಳಗಡೆ ಕುಳಿತು ಓದಬಹುದೇ? ಇದನ್ನೆಲ್ಲ ವೆರಿಫೈ ಮಾಡದೆ ಆ ಕಟ್ಟಡದ ಚಾರ್ಜ್ ತೆಗೆದುಕೊಂಡವರು ಯಾರು? ಆ ಕಟ್ಟಡದ ಚಾರ್ಜ್ ತೆಗೆದುಕೊಂಡ ಮೇಲೂ 8 ವರ್ಷಗಳಿಂದ ಸೋರುತ್ತಿದೆ ಅಂತ ಹೇಳಿದ್ದೀರಲ್ಲ ಆ ಪಿಡಬ್ಲ್ಯುಡಿ ಇಲಾಖೆ ಮೇಲೆ ಏನಾದರೂ ರಿಪೋರ್ಟ್ ಹಾಕಿದ್ದೀರಾ? ಆ ಕಂಟ್ರಾಕ್ಟರ್ ಮೇಲೆ ಆಕ್ಷನ್ ತೆಗೆದುಕೊಂಡಿದ್ದೀರಾ? ಈ ಕಳಪೆ ಕೆಲಸಕ್ಕೆ ಕಾರಣವೇನು ಅಂತ ಏನಾದರೂ ಕೇಳಿದ್ದೀರಾ? ಈ ಬಗ್ಗೆ ತಾವು ದಯವಿಟ್ಟು ಸ್ವಲ್ಪ ವಿವರಣೆ ಕೊಡಿ.

ಡಾ|| ಜಿ. ಪರಮೇಶ್ವರ : ಮಾನ್ಯ ಅಧ್ಯಕ್ಷರೇ, ಹಾಸನದಲ್ಲಿರತಕ್ಕಂಥ ಪ್ರಥಮ ದರ್ಜೆ ಕಾಲೇಜನ್ನು 1984-85ರಲ್ಲೇ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ಎಂದು ಬೇರೆ ಬೇರೆ ಮಾಡಿ ಸೈನ್ಸ್ ವಿಭಾಗಕ್ಕೆಂದು 50 ಲಕ್ಷ ರೂಪಾಯಿಗಳಲ್ಲಿ ಹೊಸದಾಗಿ ಒಂದು ಕಟ್ಟಡವನ್ನು 1994-95ರಲ್ಲಿ ಮಾಡಿದರು. ಪಿಡಬ್ಲ್ಯುಡಿಯವರೇ ಆ ಕೆಲಸ ಮಾಡಿದ್ದು, ಯಾಕೆಂದರೆ ನಮ್ಮ ಇಲಾಖೆಯಲ್ಲಿ ಇಂಜಿನಿಯರಿಂಗ್ ವಿಭಾಗ ಇಲ್ಲ. ಅವರು ಕಾಲೇಜ್ ವಹಿಸಿಕೊಟ್ಟ ವರ್ಷ ಅಲ್ಲಿ ಸೋರುತ್ತಿರಲಿಲ್ಲ, ಆಗಿನ್ನೂ ಮಳೆಗಾಲ ಇರಲಿಲ್ಲ. ಆ ವರ್ಷ ಮಳೆಗಾಲ ಬಂದ ತಕ್ಷಣ ಅದು ಸೋರಿದೆ. ತಕ್ಷಣ ಕಾಲೇಜಿನ ಪ್ರಿನ್ಸಿಪಾಲರು ಪಿಡಬ್ಲ್ಯುಡಿಗೆ ಕಾಗದ ಬರೆದು ಈ ರೀತಿ ಆಗಿದೆಯೆಂದು ತಿಳಿಸಿದ ಮೇಲೆ ಇಲಾಖೆಗೆ ಮತ್ತಷ್ಟು ಹಣ ಬಿಡುಗಡೆ ಮಾಡಬೇಕೆಂದು ಕೇಳಿದಾಗ 3 ಲಕ್ಷ ರೂಪಾಯಿಗಳ ಹಣವನ್ನೂ ಕೂಡ ಬಿಡುಗಡೆ ಮಾಡಿ ಅದಕ್ಕೆಲ್ಲ ಚುರ್ಕಿ ಹಾಕಿ ಅದು ಸೋರದ ರೀತಿಯಲ್ಲಿ ಮಾಡಿದ್ದಾರೆ. ಆದರೂ ಕೂಡ ಮತ್ತೆ ಅದು ಸೋರುತ್ತಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ಸೋರದಂತೆ ಕ್ರಮ ತೆಗೆದುಕೊಳ್ಳಲು 9 ಲಕ್ಷ ರೂಪಾಯಿಗಳ ಕೆಲಸ ಮಾಡುತ್ತಿದ್ದೇವೆ. ಇನ್ನು ಎರಡನೆಯದು, ಅದನ್ನು ಪಿಡಬ್ಲ್ಯೂಡಿಯವರೇ ಏಜೆನ್ಸಿ ತೆಗೆದುಕೊಂಡು ಮಾಡಿರುವುದು. ಅವರ ವಿರುದ್ಧವೂ ಕ್ರಮ ತೆಗೆದುಕೊಳ್ಳಬೇಕೆಂದು ಅವರಿಗೆ ಸೂಕ್ತ ಆದೇಶವನ್ನು ನಾವು ಕೊಟ್ಟಿದ್ದೇವೆ. ನಮ್ಮಲ್ಲಿ ಪಿಡಬ್ಲ್ಯುಡಿಯವರೇ ಆ ಏಜೆನ್ಸಿಯವರು ಇಲ್ಲ. ಆ ಬಗ್ಗೆ ತನಿಖೆಯನ್ನು ಮಾಡಬೇಕೆಂದು ಸಹ ನಾವು ಕಾಗದ ಬರೆದಿದ್ದೇವೆ. ಈ ತಕ್ಷಣ ತನಿಖೆ ಮಾಡಿಸಿ ಆ ವರದಿ ತರಿಸಿಕೊಂಡು ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ, ಹಾಸನದಲ್ಲಾದರೂ ಕಾಲೇಜು ಅರ್ಧಂಬರ್ಧ ಇದೆ. ಇಡೀ ರಾಜ್ಯದಲ್ಲಿ ಕಾಲೇಜು ಕಟ್ಟಡ ಇಲ್ಲದೆ 10-15 ವರ್ಷಗಳಿಂದ ಬಯಲಲ್ಲಿರುವಂತಹ ಪರಿಸ್ಥಿತಿ ಇದೆ.

ಅಧ್ಯಕ್ಷರು : ಇಡೀ ರಾಜ್ಯದ ಬಗ್ಗೆ ಸಚಿವರು ಹತ್ತಿರ ಮಾಹಿತಿ ಇರುವುದಿಲ್ಲ. ನೀವು ಬೇರೆ ಪ್ರಶ್ನೆ ಕೇಳಿ.

ಶ್ರೀ ಕೆ.ಎಚ್. ಹನುಮೇಗೌಡ : 1995ರಲ್ಲಿ ಕಟ್ಟಡವನ್ನು ಕಟ್ಟಿ ನಮಗೆ ವಹಿಸಿದರು ಅಂತ ಹೇಳುತ್ತೀರಿ. ಚುರ್ಕಿ ಎಲ್ಲ ಕಂಪ್ಲೀಟಾದ ಮೇಲೆ ಕಟ್ಟಡವನ್ನು ವಹಿಸಿಕೊಡುವುದು. ಮಳೆಗಾಲ ಬಂದ ತಕ್ಷಣ ಸೋರಿತು ಅಂತಲೂ ಹೇಳುತ್ತೀರಿ. ಹಾಗಿದ್ದರೆ ಅಲ್ಲಿ ಕಟ್ಟಡ ಸರಿಯಾಗಿ ಆಗಿದೆ ಅಂತ ನಿಮ್ಮ ಅಭಿಪ್ರಾಯವೇ? ನಿಮ್ಮ ಇಲಾಖೆಗೆ ಗೊತ್ತಾಯಿತಲ್ಲ ಅಲ್ಲಿ ಸೋರುತ್ತೆ ಅಂತ ಅದಾಗಿ ಸುಮಾರು 5 ವರ್ಷಗಳಾಯಿತು. ಸೋರುತ್ತಿದೆ ಅಂತ ಸುಮ್ಮನೆ ಕುಳಿತು ಬಿಟ್ಟರೆ ನಿಮ್ಮ ಇಲಾಖೆ ಜವಾಬ್ದಾರಿ ತಪ್ಪುವುದಿಲ್ಲ ಅದು ಗೊತ್ತಾಗಿ 5 ವರ್ಷಗಳಾದಾಗಿನಿಂದ ಇಲ್ಲಿಯವರೆಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಅವರಿಗೆ ಕಾಗದ ಬರೆದಿದ್ದೀರೋ ಅಥವಾ ಇಂಜಿನಿಯರ್ ಮೇಲೆ ಕ್ರಮ ತೆಗೆದುಕೊಂಡಿದ್ದೀರೋ? ಕಂಟ್ರಾಕ್ಟರನ್ನು ಕಪ್ಪುಪಟ್ಟಿಗೆ ಸೇರಿಸಿದ್ದೀರೋ? ಯಾಕೆಂದರೆ ನಿರಂತರವಾಗಿ ಈ ರೀತಿ ಕಟ್ಟಡ ಕಟ್ಟುವುದು ಬಿದ್ದು ಹೋಗುವುದು ಇದಕ್ಕೇ ದುಡ್ಡು ಹಾಕಿಬಿಟ್ಟರೆ ಹೊಸ ಕಟ್ಟಡ ಕಟ್ಟುವುದಕ್ಕೆ ದುಡ್ಡು ಎಲ್ಲಿ ತರುವುದು? ಹಳ್ಳಿಯವರು ಮಣ್ಣಿನ ಗೋಡೆ ಹಾಕಿಕೊಂಡು ಮನೆ ಕಟ್ಟಿದ್ದು ನೂರು ನೂರೈವತ್ತು ವರ್ಷ ಇರುತ್ತದೆ. ನಿಮ್ಮ ತಾಂತ್ರಿಕ ಪರಿಣತರು ಕಟ್ಟಿದ 50 ಲಕ್ಷ ರೂಪಾಯಿಗಳ ಕಟ್ಟಡ ಕಟ್ಟಿದ ಆರೇ ತಿಂಗಳಿಗೆ ಸೋರುತ್ತಿದೆ ಅಂದರೆ ಇದರಲ್ಲಿ ಅರ್ಥ ಏನು?

ಡಾ॥ ಜಿ. ಪರಮೇಶ್ವರ : ಮಾನ್ಯ ಸದಸ್ಯರು ತಿಳಿಸಿದಂತೆ ನಮ್ಮ ಇಲಾಖೆಯವರು ಅವರಿಗೆ ಈಗಾಗಲೇ ಕಾಗದ ಬರೆದು ಈ ಕಟ್ಟಡ ಸೋರುತ್ತಿದೆ ಮತ್ತಷ್ಟು ಹಣ ಬಿಡುಗಡೆ ಮಾಡಬೇಕೂಂತ ಹೇಳಿದಾಗ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟಾಗಿದೆ ಮತ್ತೆ ಒಂಭತ್ತೂವರೆ ಲಕ್ಷ ರೂಪಾಯಿಗಳನ್ನು ಕೊಡಬೇಕೂಂತ ಬೇಡಿಕೆ ಇಟ್ಟಿದ್ದಾರೆ, ಅದನ್ನು ಕೊಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಜೊತೆಗೆ ಪಿಡಬ್ಲ್ಯೂಡಿ ಏಜೆನ್ಸಿ, ಮೂಲಕ ಇದನ್ನು ಮಾಡಿಸಿರುವುದು. ಅವರ ಮೇಲೂ ಕ್ರಮ ತೆಗೆದುಕೊಳ್ಳಲು ನಾನು ಸೂಕ್ತ ಆದೇಶ ನೀಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಇದು ಪಿಡಬ್ಲ್ಯೂಡಿಗೆ ನೇರವಾಗಿ ಸಂಬಂಧಿಸಿದ್ದು, ಅದರ ಬದಲು ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡುವುದಕ್ಕೆ ಬರುವುದಿಲ್ಲ. ಅದಕ್ಕೆ ಇದನ್ನು ಅರ್ಧಗಂಟೆ ಚರ್ಚೆಗೆ ಒಳಪಡಿಸಿ.

ಅಧ್ಯಕ್ಷರು : ನೀವು ನೋಟೀಸ್ ಕೊಡಿ. ಮುಂದಿನ ಪ್ರಶ್ನೆ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಕೇಳಲು ನನ್ನನ್ನು ಕರೆದಿದ್ದೀರಿ, ಆದರೆ ನನಗೆ ಉತ್ತರವೇ ಬಂದಿಲ್ಲ.

ಅಧ್ಯಕ್ಷರು : ಸರ್ಕಾರ ಉತ್ತರವನ್ನೇ ಒದಗಿಸಿಲ್ಲ, ಖಂಡಿತವಾಗಿ ಮುಂದಿನ ವಾರ ಇದನ್ನು ತೆಗೆದುಕೊಳ್ಳುತ್ತೇವೆ. ಇದೇ ಸಚಿವರ ಪ್ರಶ್ನೆಗಳು ಬಂದ ದಿವಸ ನಿಮ್ಮದನ್ನೂ ಸೇರಿಸುತ್ತೇವೆ.